ಅಸಲು ದಾವಾ ಸಂಖ್ಯೆ - 129/2010
ಪಿಡಬ್ಲ್ಯೂ - 01
ದಿನಾಂಕಃ 04-07-2018
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎ ಕೆ ಪ್ರತಿವಾದಿ ಪರ ವಕೀಲರಿಂದ.

ಫಕ್ಕಿರಪ್ಪ ಜಾತೆಪ್ಪ ಲಮಾಣಿ ಇವರಿಗೆ ನಾನು ಸಂಬಂಧವನ್ನು ಹೊಂದಿರುವುದಿಲ್ಲ ಎಂದರೆ ಸರಿ. ಫಕ್ಕಿರಪ್ಪ ಜಾತೆಪ್ಪ ಲಮಾಣಿ ಇವರು ನಾನು ಜನಿಸಿರುದಕ್ಕಿಂತ ಪೂರ್ವದಲ್ಲಿ ಮೃತಪಟ್ಟಿರುತ್ತಾರೆ. ಮಲ್ಲಪ್ಪನು ಫಕ್ಕಿರಪ್ಪ ಜಾತೆಪ್ಪ ಲಮಾಣಿ ಇವರ ಜೊತೆಗೆ ಕೂಡಿ ಇರುತ್ತಿದ್ದನು ಎಂದರೆ ಸರಿಯಲ್ಲ. ಮಲ್ಲಪ್ಪನು ನಮ್ಮ ಜೊತೆಗೆ ಇರುತ್ತಿದ್ದನು. ಫಕ್ಕಿರಪ್ಪನು ಸೋಮಲಪ್ಪನ ಜೊತೆಗೆ ವಾಸ ಇದ್ದನು. ಸೋಮಲಪ್ಪ ನನ್ನ ತಂದೆಯಾಗಬೇಕು. ನಾನು ಚಿಕ್ಕವಳು ಇರುವಾಗ ನನ್ನ ತಂದೆಯವರು ಮೃತಪಟ್ಟಿರುತ್ತಾರೆ. ನಮ್ಮ ತಂದೆಯು ಮೃತಪಟ್ಟಾಗ ನಾನು 5-6 ವರ್ಷದವಳಾಗಿದ್ದೆ. ನನ್ನಕ್ಕಿಂತ ಚಿಕ್ಕವರು ಯಾರು ಇರುವುದಿಲ್ಲ ನಾನೇ ಚಿಕ್ಕವಳು ಇರುತ್ತೇನೆ.

ನನ್ನ ತಂದೆಯು ಮೃತಪಟ್ಟಾಗ ನಮ್ಮ ಕುಟುಂಬಕ್ಕೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮೆಲ್ಲರ ಮದುವೆಯನ್ನು ನಮ್ಮ ತಂದೆ ತಾಯಿ ಮಾಡಿರುತ್ತಾರೆ. ನನ್ನ ಮದುವೆಯಲ್ಲಿ ನನ್ನ ತಂದೆ ಇದ್ದರು. ನನ್ನ ಮದುವೆಯು ಎಷ್ಟನೇ ವಯಸ್ಸಿನಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ. 4-5 ವರ್ಷದವಳು ಇದ್ದಾಗ ನನ್ನ ಮದುವೆಯನ್ನು ಮಾಡಿರುವುದಿಲ್ಲ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಜೊತೆಗೆ ಬಾಳುವೆ ಮಾಡಲು ಹೋಗಿರುತ್ತೇನೆ. ಆ ಸಮಯದಲ್ಲಿ ನನ್ನ ವಯಸ್ಸು ಎಷ್ಟು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮದುವೆಯಾದ ನಂತರ ಎಷ್ಟನೇ ವರ್ಷದಲ್ಲಿ ನಾನು 1 ನೇ ಮಗುವಿಗೆ ಜನ್ಮ ನೀಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ 1 ನೇ ಮಗುವಿಗೆ 26 ವರ್ಷ ಇರುತ್ತದೆ. ನಾನು 23 ವರ್ಷ ಇರುವಾಗ ನನ್ನ ಮದುವೆ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮದುವೆಯನ್ನು ನನ್ನ ತಂದೆಯವರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 5-6 ವರ್ಷದವಳು ಇರುವಾಗ ನನ್ನ ಮದುವೆ ಆಗಿರುವುದಿಲ್ಲ. ನಿಮ್ಮ ಮದುವೆಯನ್ನು ನಿಮ್ಮ ತಂದೆಯವರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಾಯಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾದ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ 1 ನೇ ಪ್ರತಿವಾದಿಯು ಸೋಮಲಪ್ಪನ ಮೊದಲನೆ ಮಗಳು ಇರುತ್ತಾಳೆ ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಅವಳ ಗಂಡ ಕೂಡಿ ನನ್ನ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗಾಗಲಿ ಹಾಗೂ 1 ನೇ ಪ್ರತಿವಾದಿಗಾಗಲಿ ದಾವಾ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸೋಮಲಪ್ಪನ ತಂದೆ ಮಲ್ಲಪ್ಪ ಇರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಫಕ್ಕಿರಪ್ಪ ಇರುತ್ತಾನೆ ಎಂದು ನುಡಿಯುತ್ತಾರೆ. ಮಲ್ಲಪ್ಪ ನನ್ನ ಅಣ್ಣನಾಗಬೇಕು. ಮಲ್ಲಪ್ಪನಿಗೆ ನಾವು ವಾರಸುದಾರರು ಇರುವುದಿಲ್ಲ ಎಂದರೆ ಸರಿಯಲ್ಲ. 2 ರಿಂದ 5 ನೇ ಪ್ರತಿವಾದಿಯರು ಮಲ್ಲಪ್ಪನ ವಾರಸುದಾರರು ಇರುತ್ತಾರೆ ಎಂದರೆ ಸರಿ. ಮಲ್ಲಪ್ಪನ ಖಾಸ ಹೆಂಡತಿ ಮತ್ತು ಮಕ್ಕಳು ಜೀವಂತ ಇರುವಾಗ ನಾವು ಮಲ್ಲಪ್ಪನಿಗೆ ವಾರಸುದಾರರು ಆಗುವುದಿಲ್ಲ ಎಂದರೆ ಸರಿಯಲ್ಲ.

ಸೋಮಲಪ್ಪನಿಗೆ ನಾವು ವಾರಸುದಾರರು ಇರುತ್ತೇವೆ ಎಂದು ನ್ಯಾಯಾಲಯದಿಂದ ವಾರಸಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಈ ಕೇಸಿನಲ್ಲಿ ನಾವು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾನು ವಾರಸಾ ಪ್ರಮಾಣ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ ನಮ್ಮ ತಾಯಿಯು ಜೀವಂತ ಇರುವಾಗ ದಾವಾದ ಆಸ್ತಿಗಳಲ್ಲಿ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತೇವೆ. ನಮ್ಮ ಹೆಸರುಗಳನ್ನು ದಾಖಲಿಸಿದ ಬಗ್ಗೆ ದಾಖಲೆಗಳನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿರುತ್ತೇನೆ. ನಮ್ಮ ತಾಯಿಯು ಮೃತಪಟ್ಟ ಬಗ್ಗೆ ಈ ದಾವೆಯಲ್ಲಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. 7-8 ವರ್ಷಗಳ ಹಿಂದೆ ನಮ್ಮ ತಾಯಿಯವರು ಮೃತಪಟ್ಟಿರುತ್ತಾರೆ. ಈ ಪ್ರಕರಣವನ್ನು ದಾಖಲಿಸಿ 8 ವರ್ಷಗಳು ಆಗಿರುತ್ತವೆ ಎಂದರೆ ಸರಿ. ಈ ದಾವೆಯನ್ನು ದಾಖಲಿಸುವ ಸಮಯದಲ್ಲಿ ನಮ್ಮ ತಾಯಿಯವರು ಜೀವಂತ ಇರಲಿಲ್ಲ. ನಮ್ಮ ತಾಯಿಯವರು ಎಷ್ಟು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 30-40 ವರ್ಷಗಳ ಹಿಂದೆ ಸೋಮಪ್ಪನು ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಬಹಳ ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಅಂದಾಜು ಎಷ್ಟು ವರ್ಷಗಳ ಹಿಂದೆ ಸೋಮಪ್ಪ ಮೃತಪಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಅಕ್ಕನ ಮಗಳಾದ 3 ನೇ ಪ್ರತಿವಾದಿಯು ನನ್ನ ಅಕ್ಕನ ಮಗನ ಹೆಂಡತಿ ಇರುತ್ತಾಳೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಸ್ತುತ ದಾವೆಯನ್ನು ದಾಖಲಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಪ್ರತಿವಾದಿಯರು ನಮ್ಮ ದಾವೆಗೆ ತಕರಾರಿನಲ್ಲಿ ಬರೆದಿರುವ ವಿಷಯವನ್ನು ನಮ್ಮ ವಕೀಲರು ನಮಗೆ ಹೇಳಿರುತ್ತಾರೆ. ನಮ್ಮ ಪ್ರತಿವಾದ ಪತ್ರದ ಪ್ಯಾರಾ ನಂಬರ 12 ರಲ್ಲಿ ಬರೆದಿರುವ ವಿಷಯವನ್ನು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಮಾರುಕಟ್ಟೆಯ ಬೆಲೆಯನ್ನು ಕಡಿಮೆ ತೋರಿಸಿ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗಳಿಗೆ ಸಂಪೂರ್ಣ ಮಾಲೀಕರು ಇದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.